## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಾಯಕ ಕಂಪ್ಯೂಟರ್ ಎಜುಕೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಬೆಂಗಳೂರು ಇವರು ಪಿಎಂಕೆವಿವೈ-2.0 ಯೋಜನೆಯಡಿಯಲ್ಲಿ ಸಲ್ಲಿಸಿದ ತರಬೇತಿ ಕಾರ್ಯಕ್ರಮಗಳಿಗೆ ಮಂಜೂರಾತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:**
1. ದಿನಾಂಕ: 13.09.2017 ಕಾಯಕ ಕಂಪ್ಯೂಟರ್ ಎಜುಕೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಬೆಂಗಳೂರು ರವರ ತರಬೇತಿ ಕಾರ್ಯಕ್ರಮಗಳ ಪ್ರಸ್ತಾವನೆ.
2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಸಂಖ್ಯೆ: DET/TRG/SKILL/CR-16/2017-18 ದಿನಾಂಕ:06.10.2017ರಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಶಿಫಾರಸ್ಸು.
3. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 30-10-2017ರ ನಡವಳಿಗಳ ಕಂಡಿಕೆ ಸಂಖ್ಯೆ: 4ರ ಉಪ ಕಂಡಿಕೆ (6) ತರಬೇತಿ ಕಾರ್ಯಕ್ರಮಗಳ ಅನುಮೋದನೆ.
4. ಆರ್ಥಿಕ ಇಲಾಖೆಯು ಅಧಿಸೂಚನೆ ಸಂಖ್ಯೆ: ಆಇ 1328 ವೆಚ್ಚ 12/17, ದಿನಾಂಕ: 28.11.2017ರಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಕೌಉಜೀಇ 311 ಕೈತಇ 2017, ದಿನಾಂಕ: 23-08-2017. ಹಾಗೂ ತದ ನಂತರದ ತಿದ್ದುಪಡಿ ಆದೇಶಗಳು.
6. ಸಿಎಂಕೆಕೆವೈ ಸರ್ಕಾರಿ ಆದೇಶದ ಸಂಖ್ಯೆ: ಕೌಉಜಇಇ 49 ಕೈತಶಿ (ಭಾಗ-1), ದಿನಾಂಕ: 08.05-2017.
7. ಪರಿಶೀಲನಾ ಸಮಿತಿ ಸಭೆ ದಿನಾಂಕ: 07.10.2017ರ ನಡವಳಿಯ ಕಂಡಿಕೆ ಸಂಖ್ಯೆ: 1ರ ಉಪ ಕಂಡಿಕೆ (ಇ) ರಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಶಿಫಾರಸ್ಸು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1) ರಲ್ಲಿ ಕಾಯಕ ಕಂಪ್ಯೂಟರ್ ಎಜುಕೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಪಿಎಂಕೆವಿವೈ-2.0 (ಕೇಂದ್ರ ಪುರಸ್ಕೃತ-ರಾಜ್ಯ ನಿರ್ವಹಣೆ) ಯೋಜನೆಯಡಿಯಲ್ಲಿ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ದಿನಾಂಕ: 06-10-2017ರ ಪತ್ರದಲ್ಲಿ ಶಿಫಾರಸ್ಸಿನೊಂದಿಗೆ ಮೇಲೆ ಓದಲಾದ ಕ್ರಮಸಂಖ್ಯೆ (7) ರಲ್ಲಿ ದಿನಾಂಕ: 07.10.2017ರಂದು ನಡೆದ ಪರಿಶೀಲನಾ ಸಮಿತಿ ಸಭೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಯವರು ಚರ್ಚಿಸಿ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿತ್ತು. ದಿನಾಂಕ: 30-10-2017ರಂದು ನಡೆದ ಅಧಿಕಾರಯುಕ್ತ ಸಮಿತಿಯ ನಡವಳಿಯ ಕಂಡಿಕೆ 6ರನ್ವಯ ಆರ್ಥಿಕ ಇಲಾಖೆಯಿಂದ ಕೆಟಿಪಿಪಿ ಕಾಯ್ದೆ 1999ರ ಕಲಂ 4(ಜಿ) ಯಡಿ ವಿನಾಯತಿ ಪಡೆಯಲು ಶಿಫಾರಸ್ಸು ಮಾಡಿತು. ಈ ಪ್ರಸ್ತಾವನೆಗೆ ಮೇಲೆ ಓದಲಾದ ಕ್ರಮಸಂಖ್ಯೆ (3)ರ ದಿನಾಂಕ: 30-10-2017ರ ನಡವಳಿಯ 4ರ ಉಪ ಕಂಡಿಕೆ (6)ರಲ್ಲಿ ಅನುಮೋದಿಸಿ ***ಅನುಬಂಧ-1*** ರಲ್ಲಿ ತರಬೇತಿ ಕೇಂದ್ರವಾರು ಆರ್ಥಿಕ ಮತ್ತು ಭೌತಿಕ ಗುರಿಗಳಿಗೆ ಅನುಷ್ಠಾನಗೊಳಿಸಲು ಸೂಚಿಸಲಾಯಿತು. ಆರ್ಥಿಕ ಇಲಾಖೆಯು ಓದಲಾದ (4) ರಲ್ಲಿನ ಅಧಿಸೂಚನೆಯಂತೆ ಸದರಿ ಪ್ರಸ್ತಾವನೆಗೆ ಕೆ.ಟಿ.ಪಿ.ಪಿ ಅಧಿನಿಯಮ 1999 ರ ಕಲಂ 4(ಜಿ) ರಡಿ ವಿನಾಯಿತಿಯನ್ನು ನೀಡಿದೆ. ಅಧಿಕಾರಯುಕ್ತ ಸಮಿತಿಯು ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 248 ಕೈತಇ 2017, ದಿನಾಂಕ: 14.08.2017 ರಲ್ಲಿ ನೀಡಿರುವ ಆರ್ಥಿಕ ಅಧಿಕಾರವನ್ನು ಚಲಾಯಿಸಿ ಅನುಷ್ಠಾನವನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿತು.

ಆರ್ಥಿಕ ಇಲಾಖೆಯು ಈ ಸಂಸ್ಥೆಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ಯಡಿ ಮೇಲೆ ಓದಲಾದ (4) ರಲ್ಲಿ **ಬೆಂಗಳೂರು ಜಿಲ್ಲೆಯಲ್ಲಿ 2 ಜಾಬ್‌ರೋಲ್‌ಗಳಲ್ಲಿ ಒಟ್ಟು 480 ಅಭ್ಯರ್ಥಿಗಳಗೆ 7914240 ರೂಪಾಯಿಗಳ (ಎಪ್ಪತ್ತೊಂಬತ್ತು ಲಕ್ಷ ಹದಿನಾಲ್ಕು ಸಾವಿರದ ಇನ್ನೂರ ನಲವತ್ತು ರೂಪಾಯಿಗಳು ಮಾತ್ರ)** ಮೊತ್ತದಲ್ಲಿ ತರಬೇತಿಯನ್ನು ನೀಡಲು ವಿನಾಯಿತಿಯನ್ನು ನೀಡಿದೆ.

**ಆದ್ದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.**

**ಸರ್ಕಾರಿ ಆದೇಶ ಸಂ: ಕೌಉಜೀಇ 54 ಕೌಗುಸೇ 2017, ಬೆಂಗಳೂರು, ದಿನಾಂಕ: 28-12-2017**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ **ಕಾಯಕ ಕಂಪ್ಯೂಟರ್ ಎಜುಕೇಷನ್ ಪ್ರೈವೇಟ್ ಲಿಮಿಟೆಡ್**, ನಂ. 10/67, **ಬಸವ ಕೃಪಾ, 4ನೇ ಬ್ಲಾಕ್, ಎಂ.ಇ.ಐ.ಪಾಲಿಟೆಕ್ನಿಕ್ ಹತ್ತಿರ ರಾಜಾಜಿನಗರ, ಬೆಂಗಳೂರು-560 010** ವೃತ್ತಿ ತರಬೇತಿ ಸಂಸ್ಥೆಗೆ ದಿನಾಂಕ: 23-08-2017ರಲ್ಲಿನ ಸರ್ಕಾರಿ ಸುತ್ತೋಲೆಯ ಮೂಲಕ ಹೊರಡಿಸಿದ ವೃತ್ತಿ ತರಬೇತಿ ಸಂಸ್ಥೆಗಳು/ತರಬೇತಿ ಕೇಂದ್ರಗಳಿಗೆ ಗುರಿಗಳ ಹಂಚಿಕೆ, ಅಭ್ಯರ್ಥಿಗಳ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ ಮತ್ತು ಉದ್ಯೋಗ ನಿಯುಕ್ತಿ ಹಾಗೂ ಉದ್ಯೋಗ ನಿಯುಕ್ತಿ ನಂತರದ ಅನುಸರಣೆ ಕುರಿತು ವಿಧಾನಗಳ (**Procedure for Allocation of Targets to Training providers (TP), Training Centres (TCs), Training Assessment, Certification and Placement and Post Placement of Candidates)** ಮಾರ್ಗಸೂಚಿಯನ್ನು ಅನುಸರಿಸಿ ***ಅನುಬಂಧ-1*** ರಲ್ಲಿ ತರಬೇತಿ ಸಂಸ್ಥೆಯಿಂದ ನಮೂದಿಸಿದ ಉದ್ಯೋಗ ವೃತ್ತಿ ತರಬೇತಿಗಳನ್ನು ಕೈಗೊಳ್ಳಲು **ಬೆಂಗಳೂರು ಜಿಲ್ಲೆಯಲ್ಲಿ 2 ಜಾಬ್‌ರೋಲ್‌ಗಳಲ್ಲಿ ಒಟ್ಟು 480 ಅಭ್ಯರ್ಥಿಗಳಿಗೆ 7914240 ರೂಪಾಯಿಗಳ (ಎಪ್ಪತ್ತೊಂಬತ್ತು ಲಕ್ಷ ಹದಿನಾಲ್ಕು ಸಾವಿರದ ಇನ್ನೂರ ನಲವತ್ತು ರೂಪಾಯಿಗಳು ಮಾತ್ರ)** ಆರ್ಥಿಕ ಇಲಾಖೆ ಅಧಿಸೂಚನೆ ಸಂಖ್ಯೆ: ಆಇ 1328 ವೆಚ್ಚ 12/2017, ದಿನಾಂಕ: 28.11.2017ರಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ ನೀಡಿದೆ. ತರಬೇತಿ ವೆಚ್ಚವನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ವಾಹಿನಿ-1 ರಡಿ ಲೆಕ್ಕ ಶೀರ್ಷಿಕೆ 2230-02-101-0-09 ಕೌಶಲ್ಯ ಅಭಿವೃದ್ಧಿ ಮಿಷನ್ ಅಡಿಯಲ್ಲಿ ಭರಿಸಲು ಮತ್ತು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು**

1. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ನಿರ್ದೇಶಕರು, ಕೌಶಲ್ಯ ಮಿಷನ್ ಮತ್ತು ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಸಹಾಯದೊಂದಿಗೆ ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುವರು.

2. ಪಿಎಂಕೆವಿವೈ 2.0 ಫಲಶೃತಿ ಆಧಾರಿತ ಯೋಜನೆಯಾಗಿದ್ದು, **ಕಾಯಕ ಕಂಪ್ಯೂಟರ್ ಎಜುಕೇಷನ್ ಪ್ರೈವೇಟ್ ಲಿಮಿಟೆಡ್**, ಬೆಂಗಳೂರು ಪಿಎಂಕೆವಿವೈ ಸಾಮಾನ್ಯ ಮಾರ್ಗಸೂಚಿ, ಪಿಎಂಕೆವಿವೈ 2.0 ಕೇಂದ್ರ ಪುರಸ್ಕೃತ ರಾಜ್ಯ ನಿರ್ವಹಣಾ ಮಾರ್ಗಸೂಚಿ ಮತ್ತು ರಾಜ್ಯಗಳಿಗೆ ಹೊರಡಿಸಿದ ಕಾರ್ಯಚರಣೆ ಕೈಪಿಡಿ ಮತ್ತು ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯವು ನಿಗದಿಪಡಿಸಿದ ಸಾಮಾನ್ಯ ಮಾನದಂಡಗಳ (ಕ್ರ.ಸಂ.H-22011/2/2014-SDE-1, dated: 15.07.2015 and 20.05.2016: Schedule-I and amended from time to time) ರನ್ವಯ ಹೊರಡಿಸಲಾದ ಮಾರ್ಗಸೂಚಿಗಳ

ಪ್ರಕಾರ ಅನುಷ್ಠಾನವನ್ನು ಕೈಗೊಳ್ಳಬೇಕು. ಈ ಮಾನದಂಡಗಳ ಆಧಾರದ ಮೇಲೆ ಉದ್ಯೋಗ ವೃತ್ತಿವಾರು ವಿವಿಧ ಅಂಶಗಳನ್ನೊಳಗೊಂಡಂತೆ ಅನುಬಂಧದಲ್ಲಿನ ಮೊತ್ತವನ್ನು ನಿರ್ಧರಿಸಲಾಗಿದೆ. ಒಡಂಬಡಿಕೆ ಪತ್ರಕ್ಕೆ ಸಹಿ ಹಾಕುವ ಮುನ್ನ ಇನ್ನೊಮ್ಮೆ ಉದ್ಯೋಗ ವೃತ್ತಿವಾರು ವಿವಿಧ ಅಂಶಗಳು ಮತ್ತು ವೆಚ್ಚಗಳನ್ನು ಪರಿಶೀಲಿಸುವುದು. ಒಂದು ವೇಳೆ ಲಿಪಿಕ ದೋಷಗಳಿದ್ದಲ್ಲಿ ಅವುಗಳನ್ನು ಸರಿಪಡಿಸಿ ಒಟ್ಟಾರೆ ಅನುಮೋದಿತ ಮೊತ್ತವನ್ನು ಮೀರದಂತೆ ಗುರಿಗಳಲ್ಲಿ ಹೊಂದಾಣಿಕೆ ಮಾಡುವುದು.

3. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮಾರ್ಗಸೂಚಿಗಳನ್ನು ಮೇಲೆ ಓದಲಾದ ಕ್ರ. ಸಂ. (6)ರಲ್ಲಿ ಹೊರಡಿಸಲಾಗಿದ್ದು, ಸದರಿ ಮಾರ್ಗಸೂಚಿಯಲ್ಲಿ ವಿವಿಧ ವರ್ಗಗಳಿಗೆ ಒಟ್ಟು ತರಬೇತಿ ಅಭ್ಯರ್ಥಿಗಳಿಗೆ ನಿಗಧಿಪಡಿಸಿದಂತೆ ಶೇಕಡವಾರು ಮೀಸಲಾತಿಯನ್ನು ಅನುಸರಿಸುವುದು. kaushalkar.com ವೆಬ್ ಪೋರ್ಟಲ್‌ನಲ್ಲಿ ನೋಂದಾಯಿಸಿದ ಅಭ್ಯರ್ಥಿಗಳ ಪಟ್ಟಿಯಿಂದ ಅನುಬಂಧದಲ್ಲಿನ ತರಬೇತಿ ಕಾರ್ಯಕ್ರಮಗಳಿಗೆ ಅಭ್ಯರ್ಥಿಗಳ ಆಯ್ಕೆಯನ್ನು ಕೈಗೊಳ್ಳುವುದು.

4. ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯವು ನಿಗದಿಪಡಿಸಿದ ಸಾಮಾನ್ಯ ಮಾನದಂಡಗಳ (ಕ್ರ.ಸಂ.H-22011/2/14-SDE-1, dated: 15.07.2015 and 20.05.2016: Schedule-IV)ರನ್ವಯ ಕಂತುಗಳಲ್ಲಿ ಪಾವತಿ ಮಾಡುವ ವಿಧಾನದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದು.

5. **"ವೃತ್ತಿ ತರಬೇತಿ ಸಂಸ್ಥೆಗಳು/ತರಬೇತಿ ಕೇಂದ್ರಗಳಿಗೆ ಗುರಿಗಳ ಹಂಚಿಕೆ, ಅಭ್ಯರ್ಥಿಗಳ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ ಮತ್ತು ಉದ್ಯೋಗ ನಿಯುಕ್ತಿ ಹಾಗೂ ಉದ್ಯೋಗ ನಿಯುಕ್ತಿ ನಂತರ ಅನುಸರಣೆ ಕುರಿತು ವಿಧಾನಗಳ"** (**Procedure for Allocation of Targets to Training providers (TP), Training Centres (TCs), Training Assessment, Certification and Placement and Post Placement of Candidates**) ಮಾರ್ಗಸೂಚಿಯನ್ನು ಅನುಸರಿಸಿ ಉಸ್ತುವಾರಿ ಮಾಹಿತಿ ವ್ಯವಸ್ಥೆಯನ್ನು (**MIS**) ತಯಾರಿಸಿ ಗುತ್ತಿಗೆ ಮುಗಿಯುವವರೆಗಿನ ಎಲ್ಲಾ ಪ್ರಕ್ರಿಯೆಗಳ ಉಸ್ತುವಾರಿಯನ್ನು ಕೈಗೊಳ್ಳುವುದು.

6. ವೃತ್ತಿ ತರಬೇತಿ ಸಂಸ್ಥೆಯು ಮಂಜೂರಾದ ವಿವಿಧ ಉದ್ಯೋಗ ವೃತ್ತಿಗಳಲ್ಲಿ ತರಬೇತಿಯನ್ನು ಹೊಂದುವ ಅಭ್ಯರ್ಥಿಗಳ ಮೌಲ್ಯಮಾಪನ ಮತ್ತು ಪ್ರಮಾಣೀಕರಣವನ್ನು (Assessment and Certification) ಸಂಬಂಧಪಟ್ಟ ವಲಯ ಕೌಶಲ್ಯ ಪರಿಷತ್ತುಗಳು ಪಟ್ಟಿ ಮಾಡಿದ ಮೌಲ್ಯ ಮಾಪನ ಏಜೆನ್ಸಿಗಳ ಮೂಲಕ ಕೈಗೊಳ್ಳುವುದು.

7. ವೃತ್ತಿ ತರಬೇತಿ ಸಂಸ್ಥೆಯು ಅನುಬಂಧದಲ್ಲಿ ತರಬೇತಿ ತಂಡವಾರು ನಮೂದಿಸಿದ ತರಬೇತಿಯ ಅವಧಿಯ ಪ್ರಕಾರವೇ ತರಬೇತಿಯನ್ನು ಕೈಗೊಳ್ಳುವುದು. ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಮಾತ್ರ ಇದರಲ್ಲಿನ ಅಂಶಗಳು ಜಾರಿಯಲ್ಲಿರುತ್ತವೆ. ಒಂದು ವೇಳೆ ಈ ಅವಧಿಯನ್ನು ಮೀರಿದ್ದಲ್ಲಿ ಮತ್ತೆ ಹೊಸದಾಗಿ ಅಧಿಕಾರಯುಕ್ತ ಸಮಿತಿಯಿಂದ ಅನುಮೋದನೆಯನ್ನು ಪಡೆಯುವುದು.

೮. ವೃತ್ತಿ ತರಬೇತಿ ಸಂಸ್ಥೆಯು kaushalkar.com ವೆಬ್ ಪೋರ್ಟಲ್‌ನಲ್ಲಿ ಎಲ್ಲಾ ತರಬೇತಿ ಕೇಂದ್ರಗಳ ನೋಂದಣಿಯನ್ನು ಕಡ್ಡಾಯವಾಗಿ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಎ&ಇ), ಜಿ&ಎಸ್.ಎಸ್.ಎ), ಇ &ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ.
3. ನಿರ್ದೇಶಕರು ಕರ್ನಾಟಕ ಕೌಶಲ್ಯ ಮಿಷನ್ ಉದ್ಯೋಗ ಮತ್ತು ತರಬೇತಿ ಇಲಾಖೆ.
4. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ,
5. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ,
6. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮಟ್ಟದ ತಾಲ್ಲೂಕು ನೋಡಲ್ ಅಧಿಕಾರಿಗಳು,
7. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ,
8. ನಿರ್ದೇಶಕರು, ಕಾಯಕ ಕಂಪ್ಯೂಟರ್ ಎಜುಕೇಷನ್ ಪ್ರೈವೇಟ್ ಲಿಮಿಟೆಡ್, ನಂ. 10/67, ಬಸವ ಕೃಪಾ, 4ನೇ ಬ್ಲಾಕ್, ಎಂ.ಇ.ಐ.ಪಾಲಿಟೆಕ್ನಿಕ್ ಹತ್ತಿರ ರಾಜಾಜಿನಗರ,ಬೆಂಗಳೂರು-560 010.
9. ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ಪ್ರಾಂಶುಪಾಲರು ಕೈಗಾರಿಕಾ ತರಬೇತಿ ಕೇಂದ್ರ,

**ಪ್ರತಿಯನ್ನು :**

1. ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ.
6. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3&9),ವಿಧಾನ ಸೌಧ, ಬೆಂಗಳೂರು
7. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
9. ಮಿಷನ್ ನಿರ್ದೇಶಕರು, ಸಂಜೀವಿನಿ - ಕೆ.ಎಸ್.ಆರ್.ಎಲ್.ಪಿ.ಎಸ್.
10. ಮುಖ್ಯ ಯೋಜನಾಧಿಕಾರಿಗಳು, ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ (ಯುಪಿಎಎಂಯು)
11. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ.ಎಸ್. (ಸ್ಕಿಲ್ಸ್).
12. ಕೌಶಲ್ಯಾಭಿವೃದ್ಧಿ ತರಬೇತಿಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
13. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
15. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವಿಕಾಸ ಸೌಧ.
16. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

## PMKVY - CSSM Training Center wise Allocation of Targets to Training Providers

Name of the Training Provider with address KAYAKA COMPUTER EDUCATION (P) Ltd., #10/67,4th Block,Opp. to M.E.I Polytechnic,Rajajinagar, Bengaluru, Karnataka 560010

| Sl. No. | District / Taluka | Name of the Training Centre | Address of the training Centre with pin code | Sector /Job Role | Residential / Non Residential | Batch Number | Number of Candidates Allocated | Hours Of Training | Total Amount Sanctioned (In Rs) | Duration of the Training (From date to date ) | Name of Head of the TC, Contact Number and email id | Remarks |
|---|---|---|---|---|---|---|---|---|---|---|---|---|
| 1 | BANGALORE | Kayaka Computer Education (P) Ltd | Kayaka Computer Education (P) Ltd., #10/67,4th Block,Opp. to M.E.I Polytechnic,Rajajinagar, Bengaluru, Karnataka 560010 | ESSCI - Field Technician – Computing and Peripherals | Non Residential | 1 | 30 | 340 | 4,56,480.00 | 10-01-2018 To 25-04-2018 | SREEKANTH S 9008336646 sreekanth@kayaka.in | |
| 2 | | | | | | 2 | 30 | 340 | 4,56,480.00 | 20-01-2018 To 12-05-2018 | | |
| 3 | | | | | | 3 | 30 | 340 | 4,56,480.00 | 01-02-2018 To 15-05-2018 | | |
| 4 | | | | | | 4 | 30 | 340 | 4,56,480.00 | 14-02-2018 To 26-05-2018 | | |
| 5 | | | | | | 5 | 30 | 340 | 4,56,480.00 | 05-03-2018 To 18-05-2018 | | |
| 6 | | | | | | 6 | 30 | 340 | 4,56,480.00 | 09-04-2018 To 20-07-2018 | | |
| 7 | | | | | | 7 | 30 | 340 | 4,56,480.00 | 07-05-2018 To 13-08-2018 | | |
| 8 | | | | | | 8 | 30 | 340 | 4,56,480.00 | 04-06-2018 To 18-09-2018 | | |
| | | | | Job Role Wise Total | | | 240 | 36,51,840.00 | | | | |
| 1 | | | | ESSCI - Field Technician – Networking and Storage | Non Residential | 1 | 30 | 400 | 5,32,800.00 | 10-01-2018 To 15-05-2018 | | |
| 2 | | | | | | 2 | 30 | 400 | 5,32,800.00 | 20-01-2018 To 29-05-2018 | | |
| 3 | | | | | | 3 | 30 | 400 | 5,32,800.00 | 01-02-2018 To 02-06-2018 | | |
| 4 | | | | | | 4 | 30 | 400 | 5,32,800.00 | 14-02-2018 To 06-06-2018 | | |
| 5 | | | | | | 5 | 30 | 400 | 5,32,800.00 | 05-03-2018 To 05-07-2018 | | |
| 6 | | | | | | 6 | 30 | 400 | 5,32,800.00 | 09-04-2018 To 10-08-2018 | | |
| 7 | | | | | | 7 | 30 | 400 | 5,32,800.00 | 07-05-2018 To 31-08-2018 | | |
| 8 | | | | | | 8 | 30 | 400 | 5,32,800.00 | 04-06-2018 To 06-10-2018 | | |
| | | | | Job Role Wise Total | | | 240 | 42,62,400.00 | | | | |
| Center Total | | | | | | | 480 | 79,14,240.00 | | | | |

ಸರ್ಕಾರದ ಅಧೀನ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ
ವಿಕಾಸ ಸೌಧ, ಬೆಂಗಳೂರು

## The Training Provider/Agencies of PMKVY proposals for CSSM in Karnataka

**Name of the Training Provider with address KAYAKA COMPUTER EDUCATION (P) Ltd., #10/67,4th Block,Opp. to M.E.I Polytechnic,Rajajinagar, Bengaluru, Karnataka 560010**

| Sl No | Name of agency | Sector skill council | Date of submission of proposal | Training Center location | Accreditation in SMART portal (Y/N) | Star Rating | Job Role | QP Code | Training Duration in hrs | Training Target Candidates | Training Cost/hour/ Candidate Rs. | Total Training Cost in Rs. | Assessment Cost/Trainee Rs. | Total Assessment Cost Rs. | Total Cost Rs. |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | *Kayaka Computer Education (P) Ltd | ESSCI | 13.09.2017 | Rajajinagar Bengaluru | Y | 4 | Field Technician – Computing and Peripherals | ELE/Q4601 | 340 | 240 | 42.4 | 3,459,840 | 800 | 192,000 | 3,651,840 |
| | | ESSCI | 13.09.2017 | Rajajinagar Bengaluru | Y | 4 | Field Technician – Networking and Storage | ELE/Q4606 | 400 | 240 | 42.4 | 4,070,400 | 800 | 192,000 | 4,262,400 |
| Center Total | | | | | | | | | | 480 | - | 7,530,240 | - | 384,000 | 7,914,240 |

KAYAKA COMPUTER EDUCATION (P) LTD. BANGALORE-10

Neelu S.N



